ಪದೇ ಅಡ್ಡಿಪಡಿಸತಕ್ಕಂಥ ನೀತಿಯನ್ನು ನಾನು ಪ್ರತಿಭಟಿಸುತ್ತಾ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಎ.ಬಿ. ಜಕನೂರು : ಮಾನ್ಯ ಉಪಾಧ್ಯಕ್ಷೀಣೆಯವರೇ, ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ಸಿಟ್ಟಿನ ಭರದಲ್ಲಿ ಶ್ರೀ ವೈ. ನಾಗಪ್ಪನವರನ್ನು ಉದ್ದೇಶಿಸಿ 'ನೀನ್ಯಾರೋ ನನಗೆ ಹೇಳಲಿಕ್ಕೆ' ಎಂದು ಹೇಳಿದ್ದಾರೆ. ಅದು ಕಡತಕ್ಕೆ ಹೋಗಿರುವುದರಿಂದ ಆ ಪದವನ್ನು ಕಡತದಿಂದ ತೆಗೆಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆಗಬಹುದು.

(ಗೊಂದಲ)

ಶಾ. ವೈ. ನಾಗಪ್ಪ : ಇವರು ವಿಧಾನಸಭೆಯಲ್ಲಿ ಛಾಲೆಂಜ್ ಮಾಡುತ್ತಿದ್ದಾರೆ. ಛಾಲೆಂಜ್ ಮಾಡುವುದು ಹೊರಗಡೆ ಚುನಾವಣೆಯಲ್ಲಿ ಇಲ್ಲಿ ಏನು ಇವರು ಛಾಲೆಂಜ್ ಮಾಡುವುದು?

MADAM CHAIRMAN : The House stands adjoeurn to meet at 5.00 P.M.

(ಸಭೆಯು ಸಂಜೆ 6.05 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

ಮುಖ್ಯ ಮಂತ್ರಿಗಳಿಂದ ಮನವಿ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವ ಕಾಲದಲ್ಲಿ ಸ್ವಲ್ಪ ಆಡಿತಡೆ ಉಂಟಾಯಿತೆಂಬ ಭಾವನೆಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಅವರು ಹೊರಗೆ ಹೋದರೆಂದು ತಿಳಿದುಬಂತು. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಈ ಸಂದರ್ಭದಲ್ಲಿ ಅವರಿಗೆ ಉತ್ತರ ಕೊಡತಕ್ಕದ್ದು ನಮ್ಮ ಕರ್ತವ್ಯ. ಆ ಸದಸ್ಯರೇ ಇರಬಹುದು. ಬೇರೆ ಮಾನ್ಯ ಸದಸ್ಯರು ಯಾರೇ ಇರಬಹುದು. ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ಮಾತನಾಡುವುದಕ್ಕೆ, ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವುದಕ್ಕೆ ಹಕ್ಕು ಇದೆ. ಅದೇರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದಮೇಲೆ ಅದಕ್ಕೆ ಏನು ಉತ್ತರವನ್ನು ಕೊಡಬೇಕೆಂಬುದಕ್ಕೆ ನಮಗೂ ಕೂಡ ಹಕ್ಕು ಇದ್ದೇ ಇರುತ್ತದೆ. ಆ ಹಕ್ಕಿನ ವ್ಯಾಪ್ತಿಯಲ್ಲಿ ಕವರ್ ಮಾಡುವುದಕ್ಕೆ ನಮಗೂ ಸಾಧ್ಯಾವಾಗುತ್ತದೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹಿರಿಯ ಸದಸ್ಯರು, ಅವರೂ ಕೂಡ ತಡೆದುಕೊಳ್ಳಬಹುದಿತ್ತು. ಅವರೂ ಕೂಡ ಸಾಕಷ್ಟು ವಿಚಾರವನ್ನು ಮಾತನಾಡಿದ್ದರೂ, ಇನ್ನೂ ಸ್ವಲ್ಪ ಮಾತನಾಡುವುದು ಇತ್ತು. ಅದರೂ ಕೂಡ ಅದಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಕೇಳಿ ನಮಗೂ ಸಮಾಧಾನ ಆಗಲಿಲ್ಲ.

ಮೇಲೂ ಪೇಪರ್ ಮತ್ತು ಪೆನ್ಸಿಲ್‌ನ್ನು ಇಟ್ಟಿದ್ದೇವೆ. ಏಕೆಂದರೆ, ಅವರು ಭಾಷಣ ಮಾಡಿದ ನಂತರ ನಿಮ್ಮ ಪಕ್ಷದವರನ್ನೇ ಕರೆಯತಕ್ಕದ್ದು. ಆದುದರಿಂದ ಅವರು ಹೇಳಿದ್ದನ್ನು ಕೇಳಿಕೊಂಡು ನೀವು ಇನ್ನೂ ಚುರುಕಾಗಿ ಡಿಬೇಟ್ ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ.ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ಕೈಮುಗಿದು ಬೇಡಿಕೊಳ್ಳುವುದೇನೆಂದರೆ, ಕೈಗೆ ಪೆನ್ಸಿಲ್‌ನ್ನು ತೆಗೆದುಕೊಂಡು ಪೇಪರ್‌ನ್ನು ಉಪಯೋಗ ಮಾಡಿಕೊಳ್ಳತಕ್ಕದಾರಿಗೆ ಬರಬೇಕೆಂದು ಅತ್ಯಂತ ನಮ್ರತೆಯಿಂದ ಸೂಚಿಸಬಯಸುತ್ತೇನೆ. ಈ ಸದನದಲ್ಲಿ ಮಾತನಾಡತಕ್ಕ ಹಕ್ಕನ್ನು ಯಾರ ದಾಕ್ಷಿಣ್ಯದಿಂದಲೂ, ಯಾವ ಸದಸ್ಯರೂ ಪಡೆದಿಲ್ಲ. ಜನರ ದಾಕ್ಷಿಣ್ಯದಿಂದ ಇಲ್ಲಿಗೆ ಬಂದಿದ್ದಾರೆ. ನೀವು ಭಾಷಣ ಮಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಮುಕ್ತ ಅವಕಾಶ ಯಾವರೀತಿ ಇದೆಯೋ ಅಂಥದೇ ಅವಕಾಶವನ್ನು ಮಾನ್ಯ ವಿರೋಧ ಪಕ್ಷದವರಿಗೂ ನಾವು ಕೊಡದೇ ಹೋದರೆ ನಮ್ಮ ಪ್ರಜಾಪ್ರಭುತ್ವ ಎಂಬುದಕ್ಕೆ ಅರ್ಥವೇ ಇಲ್ಲದಂತಾಗುತ್ತದೆ.

ಆದ್ದರಿಂದ ದಯವಿಟ್ಟು ವಿರೋಧಪಕ್ಷದವರು ಇರತಕ್ಕಂಥದ್ದು ಟೀಕೆ ಮಾಡಲಿಕ್ಕೆ. ಅವರ ಸರ್ಕಾರ ಮಧ್ಯಪ್ರದೇಶದಲ್ಲಿದೆ. ಹಾಗೆಯೇ ನಿಮ್ಮ ಸರ್ಕಾರ ಬೇರೆ ಕಡೆ ಇರಬಹುದು. ಮಧ್ಯ ಪ್ರದೇಶದಲ್ಲಿ ನಮ್ಮ ಸರ್ಕಾರ ಹೀಗೆ ಮಾಡಿತು ಎಂದರೆ 10 ಜನ ಅವರಮೇಲೆ ಧಾಳಿಮಾಡಿದರೆ ಅದರಲ್ಲೂ ಭಾಷಣ ಮಾಡತಕ್ಕಂಥ ಕಾಲದಲ್ಲಿ ಒಂದು ಚೈನ್‌ಆಫ್ ಥಾಟ್ ಇರಬೇಕು. ಈಗ ನೀವೆ ಮಾನ್ಯ ಸದಸ್ಯರು ಯಾರಾದರು ಭಾಷಣ ಮಾಡುತ್ತಿದ್ದರೆ ಈ ಕಡೆಯಿಂದ ಮಧ್ಯಮಧ್ಯೆ ಇಂಟರ್‌ಫ್ಷನ್ ಬಂದರೆ ನಿಮ್ಮ ಚೈನ್ ಆಫ್ ಥಾಟ್ ಡಿಸ್‌ಕನೆಕ್ಟ್ ಆಗಿ ಎಲ್ಲೋ ವಿಚಾರಧಾರೆಗೆ ಬದಲು ವಿಚಾರ ಗೊಂದಲಕ್ಕೆ ಅವಕಾಶ ಉಂಟಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸಭಾನಾಯಕರಾಗಿ ತಮ್ಮ ಸದ್ಭಾವನೆಯನ್ನು ಬಹಳವಾಗಿ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಸಭಾಧ್ಯಕ್ಷನಾಗಿ ನಾನು ನನ್ನ ಧ್ವನಿಗೂಡಿಸುತ್ತೇನೆ. ನಾನು ದೈನ್ಯದಿಂದ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳತಕ್ಕಂಥದ್ದೇನೆಂದರೆ, ಈ ಸಭೆಯ ನಡವಳಿಕೆಗಳು ಆದರ್ಶಪ್ರಾಯವಾಗಿರತಕ್ಕಂಥ ರೀತಿಯಲ್ಲಿ ನೀವು ಸಭಾನಾಯಕರಿಗೆ, ಸಭಾಧ್ಯಕ್ಷರಿಗೆ ಸಹಕಾರ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗ ಮಾನ್ಯ ವಿರೋಧಪಕ್ಷದ ಸ್ನೇಹಿತರು ಯಾರೂ ಇಲ್ಲ. ಅವರಿಗೆ ನಾನು ಪ್ರಾರ್ಥನೆ ಮಾಡುತ್ತೇನೆ. ಈಗ ನಡೆದಂಥ ಘಟನೆ ಇನ್ನು ಮುಂದೆ ನಡೆಯದರೀತಿಯಲ್ಲಿ ಸಂಪೂರ್ಣವಾದ ಆಶ್ವಾಸನೆಯನ್ನು ಸಭಾನಾಯಕರು ಕೊಟ್ಟಿರತಕ್ಕಂಥ ಹಿನ್ನೆಲೆಯಲ್ಲಿ ಅವರು ಏನು ಸಭಾತ್ಯಾಗ ಮಾಡಿದ್ದಾರೆ, ಸಭೆಗೆ ಬಹಿಷ್ಕಾರ ಹಾಕಿದ್ದಾರೆ ಅದನ್ನು ಪುನರ್ವಿಮರ್ಶೆಮಾಡಿ ನಾಳೆ ಈ ಸಭೆಯಲ್ಲಿ ಸಕ್ರೀಯ ಪಾತ್ರವನ್ನು ವಹಿಸಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮತ್ತೊಮ್ಮೆ ಮಾತನಾಡುತ್ತಾ ಮಾನ್ಯ ವಿರೋಧಪಕ್ಷದ ನಾಯಕರು ಯಾರು ಸಭಾತ್ಯಾಗ ಮಾಡಿದ್ದಾರೆ, ಮಾನ್ಯ ಯಡಿಯೂರಪ್ಪನವರು ಅಷ್ಟೇ ಅಲ್ಲ, ಅವರ ಪಕ್ಷದವರು ಅಷ್ಟೇ ಅಲ್ಲ, ಇತರರಿಗೂ ಕೂಡ ನಾನು ವಿನಂತಿಮಾಡುತ್ತೇನೆ. ವಿರೋಧಪಕ್ಷದ ನಾಯಕರು ಮತ್ತು ಬೇರೆ ಮಿತ್ರರೂ ಕೂಡ ಬಂದು ಭಾಗವಹಿಸಿ ಸಭೆಯ ಕಾರ್ಯಕಲಾಪಗಳನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗೋಣವೆಂದು ನನ್ನ ವಿನಂತಿ.

ಅಧ್ಯಕ್ಷರು : ಅವರೆಲ್ಲರೂ ನಾಳೆ ಈ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಎನ್ನತಕ್ಕಂಥ ಆಶಾಭಾವನೆಯಿಂದ, ಈಗ ಸಭೆಯನ್ನು ಮುಂದುವರಿಸಿ ನಾಳೆ 11-00 ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದಕ್ಕೆ ಕೋರುತ್ತೇನೆ.

(ಸದನವು ಸಾಯಂಕಾಲ ಆರುಗಂಟೆ ಹದಿಮೂರು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಶುಕ್ರವಾರ ದಿನಾಂಕ 28ನೇ ಫೆಬ್ರುವರಿ 1992ರಂದು ಬೆಳಿಗ್ಗೆ 11-00ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).